# ಗುತ್ತು ಮನೆಯಲ್ಲಿ ಪಿಲಿನಲಿಕೆ ಕಾರ್ಯಕ್ರಮ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಪಿಲಿಕುಳದ ಗುತ್ತು ಮನೆಯಲ್ಲಿ ದಿನಾಂಕ **21.03.2023 ರ** ಮಂಗಳವಾರ ಆಯೋಜಿಸಿದ್ದ ಕರಾವಳಿಯ ಹುಲಿ ವೇಷ ಕುಣಿತ (ಪಿಲಿ ನಲಿಕೆ) ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಧರ್ಮಶಾಸ್ತ ಚೆಂಡೆ ಬಳಗ ಕುಲಶೇಕರ ಇಲ್ಲಿನ ಕಲಾವಿದರು ಈ ಯಶಸ್ವಿ ಪ್ರದರ್ಶನವನ್ನು ನಡೆಸಿ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು. ಈ ಕಾರ್ಯಕ್ರಮವನ್ನು ವೀಕ್ಷಿಸಲು ಅಪಾರ ಸಂಖ್ಯೆಯಲ್ಲಿ ವಿದೇಶಿ ಪ್ರವಾಸಿಗರು (ಯುಎಸ್ಎ, ಜರ್ಮನಿ, ಇಂಗ್ಲೇಂಡ್, ಆಸ್ಟ್ರೇಲಿಯಾ) ಆಗಮಿಸಿದ್ದರು. ವಿವಿಧ ಶಾಲೆಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರು , ಸಾರ್ವಜನಿಕರು ಹೀಗೆ ಒಟ್ಟು ಮುನ್ನೂರಕ್ಕಿಂತಲೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಅಭಿಷೇಕ್ ವಿ., ಆಡಳಿತಾಧಿಕಾರಿ ಶ್ರೀ ಮನೀಶ್ ನಾಯಕ್, ಪ್ರಾಧಿಕಾರದ ನಾಮ ನಿರ್ದೇಶಿತ ಸದಸ್ಯರಾದ ಶ್ರೀ ಉಮೇಶ್ ಶೆಟ್ಟಿ, ಸಂಸ್ಕೃತಿ ಗ್ರಾಮದ ಯೋಜನಾಧಿಕಾರಿ ಡಾ.ನಿತಿನ್ ಎನ್.ಕೆ., ಸಸ್ಯಕಾಶಿ ವಿಭಾಗದ ಶ್ರೀ ರಾಮಕೃಷ್ಣ ಮರಾಟಿ  ಮತ್ತು  ಪ್ರಾಧಿಕಾರದ ಸಿಬ್ಬಂದಿಗಳು ಹಾಜರಿದ್ದರು. ಬೆಳಿಗ್ಗೆ 10 ರಿಂದ 1 ಗಂಟೆಯವರೆಗೆ ಹಲವು ಬಾರಿ ಗುತ್ತು ಮನೆಯ ಅಂಗಳ, ವರಾಂಡ, ಒಳಭಾಗದಲ್ಲಿ ಹುಲಿವೇಷ ಕುಣಿತ ಪ್ರದರ್ಶನ ನಡೆದಿದ್ದು, ನೋಡಿದವರೆಲ್ಲರೂ ಸಂತಸಗೊಂಡಿರುತ್ತಾರೆ.






ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮಂಗಳೂರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಧರ್ಮಶಾಸ್ತ ಚೆಂಡೆ ಬಳಗ
ಹುಲಿವೇಷ ಕುಣಿತ ಪ್ರದರ್ಶನ



